**ಮಾನ್ಯ ವಿಧಾನ ಪರಿಷತ್ ಸದಸ್ಯರಾದ_ಶ್ರೀ ಛಲವಾದಿ ಟಿ  ನಾರಾಯಣ ಸ್ವಾಮಿ ರವರು ನಿಯಮ 72 ರಡಿಯಲ್ಲಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ.**

**ಗಮನ ಸೆಳೆಯುವ ಸೂಚನೆ:**

ನಗರಾಭಿವೃದ್ಧಿ ಇಲಾಖೆಯ ಅಧೀನದಲ್ಲಿರುವ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಲ್ಲಿ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಸಹಾಯಕ ಕಾರ್ಯಪಾಲಕ ಅಭಿಯಂತರರ ವೃಂದದ 01.01.2021ಕ್ಕೆ ಅನ್ವಯವಾಗುವಂತೆ ಅಂತಿಮ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಲು ನಗರಾಭಿವೃದ್ಧಿ ಇಲಾಖೆಯ ಪತ್ರ ಸಂಖ್ಯೆ:ನಅಇ**/38/**ಯುಡಬ್ಲ್ಯೂಇ**/2023(**ಇ**)** ದಿನಾಂಕ**:17.10.2023** ರಂದು ಮಾರ್ಗಸೂಚಿಯನ್ನು ನೀಡಿರುತ್ತದೆ. ಅದರ ಪ್ರಕಾರ ಅಂತಿಮ ಜೇಷ್ಠತಾ ಪಟ್ಟಿಯನ್ನು ತಯಾರಿಸುವ ಕುರಿತು ಮಂಡಳಿಯು ಕೋರಿರುವ ಸ್ಪಷ್ಟೀಕರಣಕ್ಕೆ ಸರ್ಕಾರವು ಮಾರ್ಗಸೂಚಿಗಳನ್ನು ಹೊರಡಿಸಿದ್ದು ಅದರನ್ವಯ ಸದರಿಯವರಿಗೆ ಸ್ಥಾನಪನ್ನ ಮುಂಬಡ್ತಿ ನೀಡಲು ನೇಮಕಾತಿ/ಸಕ್ಷಮ ಪ್ರಾಧಿಕಾರವಾದ ಮಂಡಳಿಯು ಕ್ರಮವಹಿಸದಿರುವುದು ಕಂಡು ಬಂದಿರುವ ಕಾರಣ ಅನುಸೂಚಿತ ಜಾತಿ ಮತ್ತು ಪಂಗಡದ ಅಧಿಕಾರಿ/ನೌಕರರಿಗೆ ಮುಂಬಡ್ತಿ ದೊರಕುವಲ್ಲಿ ಅನ್ಯಾಯವಾಗಿದ್ದು ಈ ಕುರಿತಂತೆ ಸರ್ಕಾರವು ಕೈಗೊಂಡ ಕ್ರಮಗಳ ಬಗ್ಗೆ.

**ಉತ್ತರ:**

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಕಾಯ್ದೆ-1973 ರನ್ವಯ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಒಂದು ಸ್ವಾಯತ್ತ ಸಂಸ್ಥೆಯಾಗಿದ್ದು ಮಂಡಳಿಯ ವೃಂದ ಮತ್ತು ನೇಮಕಾತಿ ನಿಯಮಾವಳಿಯನ್ವಯ ಸಹಾಯಕ ಕಾರ್ಯಪಾಲಕ ಅಭಿಯಂತರರ ವೃಂದದ ನೇಮಕಾತಿ ಪ್ರಾಧಿಕಾರವು ಮಂಡಳಿಯಾಗಿರುತ್ತದೆ. 01.01.2021ಕ್ಕೆ ಅನ್ವಯವಾಗುವಂತೆ ಮಂಡಳಿಯ ಸಹಾಯಕ ಕಾರ್ಯಪಾಲಕ ಅಭಿಯಂತರರ ವೃಂದದ ಅಂತಿಮ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸುವ ಕುರಿತು ಸರ್ಕಾರದ ಪತ್ರ ಸಂಖ್ಯೆ:ನಅಇ**/38/**ಯುಡಬ್ಲ್ಯೂಇ**/2023(**ಇ**)** ದಿನಾಂಕ**:17.10.2023** ರಲ್ಲಿ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ ಮಾರ್ಗಸೂಚಿಯನ್ನು ನೀಡಲಾಗಿದ್ದು, ಸದರಿ ಮಾರ್ಗಸೂಚಿಯನ್ವಯ 01.01.2021ಕ್ಕೆ ಅನ್ವಯವಾಗುವಂತೆ ಸಹಾಯ್ಯಕ ಕಾರ್ಯಪಾಲಕ ಅಭಿಯಂತರರ ವೃಂದದ ಅಂತಿಮ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸುವ ಕುರಿತು ಮಂಡಳಿಯ ಹಂತದಲ್ಲಿ ಪರಿಶೀಲಿನೆಯಲ್ಲಿದ್ದು ಅಂತಿಮ ಜೇಷ್ಠತಾ ಪಟ್ಟಿಯು ಪ್ರಕಟವಾದ ನಂತರ ಅರ್ಹ ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ ಮುಂಬಡ್ತಿ ನೀಡುವ ಬಗ್ಗೆ ನಿಯಮಾನುಸಾರ ಪರಿಶೀಲಿಸಿ ಸೂಕ್ತ ಕ್ರಮವಹಿಸಲಾಗುವುದು.

ನಅಇ 52 ಯುಡಬ್ಲ್ಯುಇ 2023

11/12/2023

(ಸುರೇಶ್ ಬಿ. ಎಸ್)

ನಗರಾಭಿವೃದ್ಧಿ ಮತ್ತು ನಗರ

ಯೋಜನೆ ಸಚಿವರು